ಓ.ಎಸ್. ನಂ. 179/2012

ಪಿ.ಡಬ್ಲ್ಯು: 02 (ರಾಜಣ್ಣ)

ದಿನಾಂಕಃ 01.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 10 ನೇ ಪ್ರತಿವಾದಿ ಪರ – ಶ್ರೀ ಡಿ ಕೆ ವಕೀಲರಿಂದ.

ನನ್ನ ತಂದೆ-ತಾಯಿಯ ಹೆಸರು ಓಬಯ್ಯ ಮತ್ತು ಓಬಮ್ಮ. ನನ್ನ ತಂದೆ ಓಬಯ್ಯ ಈ ದಾವೆಯನ್ನು ದಾನಪತ್ರದ ಪ್ರಕಾರ ವಿಭಾಗ ಆಗಲು ನಮ್ಮ ಚಿಕ್ಕಪ್ಪ ಒಪ್ಪದೇ ಇರುವ ಕಾರಣ ಹೂಡಿರುತ್ತೇವೆ. ದಾವಾ ಆಸ್ತಿಗಳು ಓಬಯ್ಯ ತಂದೆ ಬೋರಯ್ಯ ಅವರ ಒಟ್ಟು ಕುಟುಂಬದ ಆಸ್ತಿ ಎಂದರೆ ಹೌದು. ಸರ್ವೆ ನಂಬರ್ 150 ಬಗ್ಗೆ ಈ ದಾವೆಯನ್ನು ಸಲ್ಲಿಸಿರುತ್ತೇವೆ. ಈ ದಾವೆಯನ್ನು ನಾವು ಸಲ್ಲಿಸಿರುತ್ತೇವೆ. ಸಾಕ್ಷಿ ಮುಂದುವರೆದು ನನ್ನ ತಂದೆ ದಾವೆಯನ್ನು ಸಲ್ಲಿಸಿರುತ್ತಾರೆ. ದಾನಪತ್ರದ ಆಸ್ತಿ ಮತ್ತು ನಮ್ಮ ತಾತನ ಆಸ್ತಿಗೆ ಸಂಬಂಧಪಟ್ಟಂತೆ ಈ ದಾವೆಯನ್ನು ಹೂಡಿರುತ್ತೇವೆ. ಅದರ ವಿಸ್ತೀರ್ಣ 26.30 ಎಕರೆ ಇದೆ. ನಾವು ಈ ದಾವೆಯನ್ನು 17.35 ಸೆಂಟ್ಸ್‌ಗೆ ಸಲ್ಲಿಸಿರುತ್ತೇವೆ.

ನಮ್ಮ ಊರಿನಲ್ಲಿ ಓಬಯ್ಯ ಮತ್ತು ಓಬಮ್ಮ ಎಂಬ ಹೆಸರಿನವರು ಹಲವಾರು ಜನ ಇದ್ದಾರೆ ಎಂದರೆ ಹೌದು. ಈ ದಾವೆಯ ವಾದಿಯಾಗಿರುವ ಓಬಯ್ಯನಿಗೆ ಬೋರಮ್ಮ ಎಂಬ ಹೆಂಡತಿ ಇದ್ದಳು ಎಂದರೆ ಹೌದು. ಅವರಿಗೆ ಒಬ್ಬಳೇ ಮಗಳು ಸಣ್ಣ ಓಬಕ್ಕ ಎಂದರೆ ಹೌದು. ಸಾಕ್ಷಿ ಮುಂದುವರೆದು ಬೋರಮ್ಮ ಮೃತಪಟ್ಟ ನಂತರ ಓಬಮ್ಮಳನ್ನು ಮದುವೆಯಾಗಿರುತ್ತಾರೆ. ಸಣ್ಣ ಓಬಕ್ಕ 10 ನೇ ಪ್ರತಿವಾದಿ ಎಂದರೆ ಹೌದು.

ಈ ಪ್ರಕರಣದ ಬಗ್ಗೆ ತಿಳಿದುಕೊಂಡು ನನ್ನ ತಂದೆ ತಾಯಿಯ ಹೆಸರು ಓಬಯ್ಯ ಮತ್ತು ಓಬಮ್ಮ ಎಂಬ ಹೆಸರಿನ ಹೊಂದಾಣಿಕೆ ಇರುವುದನ್ನು ದುರಪಯೋಗಪಡಿಸಿಕೊಂಡು ನಾನು ಯಾವುದೇ ಸಂಬಂಧ ಇಲ್ಲದೇ ಇದ್ದರು ನಾವು ವಾದಿಯ ವಾರಸುದಾರರವೆಂದು ಈ ಪ್ರಕರಣದಲ್ಲಿ ಸೇರಿಕೊಂಡಿರುತ್ತೇವೆ ಎಂದರೆ ಸುಳ್ಳು. ನಾನು ಓಬಯ್ಯನ ವಾರಸುದಾರರೆಂದು ತೋರಿಸಲು ಯಾವುದೇ ದಾಖಲಾತಿ ಹಾಕಿರುವುದಿಲ್ಲ ಎಂದರೆ ಆಧಾರ್ ಕಾರ್ಡ ಹಾಕಿರುತ್ತೇನೆ.

ನಿಪಿ 16 ನನ್ನ ತಂದೆ ಸಲ್ಲಿಸಿದ ದಾಖಲಾತಿ ಎಂದರೆ ಹೌದು. ಅದರಲ್ಲಿ ನನ್ನ ಹೆಸರು ಇದೆಯಾ ಎಂದರೆ ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ತಂದೆ ತಾಯಿಯ ಹೆಸರಿಗೂ ವಾದಿಯ ಹೆಸರಿಗೂ ಹೊಂದಾಣಿಕೆಯಾಗುವ ಕಾರಣ ನಾನು ವಾರಸುದಾರ ಎಂದು ಈ ದಾವೆಯಲ್ಲಿ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ 10 ನೇ ಪ್ರತಿವಾದಿಯನ್ನು ಹೊರತುಪಡಿಸಿ ಬೇರೆ ಯಾವುದೇ ವಾರಸುದಾರರು ಇರುವುದಿಲ್ಲ ಎಂದರೆ ಸುಳ್ಳು. ನನ್ನ ಪ್ರಕಾರ 10 ನೇ ಪ್ರತಿವಾದಿ ನನ್ನ ತಂದೆಯ ಮೊದಲನೇಯ ಹೆಂಡತಿ ಮಗಳಾಗಿದ್ದರು ನಾನು ಆಕೆಯನ್ನು ಯಾಕೆ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಇದು ಅಣ್ಣತಮ್ಮಂದಿರ ದಾವೆಯಾದ ಕಾರಣ ಸೇರಿಸಿರುವುದಿಲ್ಲ. ನನ್ನ ತಂದೆ ಇಬ್ಬರು ಹೆಂಡತಿಯರು ಎಂದು ಹೇಳುತ್ತಿದ್ದು ಅದನ್ನು ದಾವೆಯಲ್ಲಿ ಬರೆಸಿರುತ್ತೇನೆಯೇ ಎಂದರೆ ಇಲ್ಲ. ನಾವು 10 ನೇ ಪ್ರತಿವಾದಿಗೆ ಮೋಸ ಮಾಡುವ ಸಲುವಾಗಿ ಈ

ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಓಬಯ್ಯನ ಹೆಂಡತಿ ಎಂದು ತೋರಿಸಲು ಯಾವುದಾದರೂ ದಾಖಲಾತಿಯನ್ನು ಹಾಜರುಪಡಿಸಿದ್ದೇನೆಯೇ ಎಂದರೆ ಆಧಾರ್ ಕಾರ್ಡ ಬಿಟ್ಟು ಎಲ್ಲ ದಾಖಲಾತಿಗಳನ್ನು ಕೊಟ್ಟಿದ್ದೇವೆ. ನಾನು ಯಾವುದೇ ದಾಖಲಾತಿಯನ್ನು ಆ ಬಗ್ಗೆ ಸಲ್ಲಿಸಿರುವುದಿಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.